**<u>ಸಾಕ್ಷಿಗೆ ದಿನಾಂಕ 22.11.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 1 ನೇ ಎದುರುದಾರರ ಪರ ಶ್ರೀ. ಹೆಚ್.ಎ.ಕೆ.ಎಸ್. ವಕೀಲರಿಂದಃ</u>**

ಈ ಅಪಘಾತದ ಬಗ್ಗೆ ಮಾಹಿತಿ ಇರುತ್ತದೆ. ಅಪಘಾತ ಸ್ಥಳಕ್ಕೆ ಹೋಗಿರುತ್ತೇನೆ. ಅಪಘಾತದ ಕುರಿತು ನನ್ನ ಪತಿ ದೂರು ನೀಡಿರುತ್ತಾರೆ. ನಿಪಿ-2 ರ ಪ್ರಕಾರ ಅಪಘಾತವು ಟ್ರಾಕ್ಟರ್ ಟ್ರೈಲರ್ ನೋಂದಣಿ ಸಂ.ಕೆಎ-05-ಎ-0081 ಮತ್ತು ಕೆಎ-05-ಎ-0082 ಆಗಿದೆ ಎಂದರೆ ಸರಿ. ಪ್ರಥಮ ವರ್ತಮಾನ ವರದಿ ಸಹ ಸದರಿ ಟ್ರಾಕ್ಟರ್ ಟ್ರೈಲರ್ ವಿರುದ್ಧ ತಯಾರಿಸಲಾಗಿದೆ ಎಂದರೆ ಸರಿ. ನಿಪಿ.6 ರ ಪ್ರಕಾರ ಟ್ರಾಕ್ಟರ್ ಟ್ರೈಲರ್ ಸಂಖ್ಯೆ ಕೆಎ-05-ಎ-0081 ಮತ್ತು ಕೆಎ-05-ಎ-0082 ನ್ನು ಪ್ರತ್ಯಕ್ಷ ಸಾಕ್ಷಿ ದೀಲಿಪ್ ರವರು ತೋರಿಸಿರುತ್ತಾರೆ ಎಂದರೆ ಸರಿ. ನಿಪಿ-10 ರ ಪ್ರಕಾರ ನ್ಯಾಯಾಲಯಕ್ಕೆ ಸದರಿ ಟ್ರಾಕ್ಟರ್ ಟ್ರೈಲರ್ ಅಪಘಾತಪಡಿಸಿದೆ ಎಂದು ವರದಿ ಮಾಡಲಾಗಿದೆ ಎಂದರೆ ಸರಿ. ನಿಪಿ.12 ರ ದೋಷರೋಪಣಾ ಪಟ್ಟಿಯಲ್ಲಿ ಸಾಕ್ಷಿ ಸಂಖ್ಯೆ 11 ರ ಮುಂದೆ ಕೆಎ-05-ಎ-0081 ಮತ್ತು ಕೆಎ-05-ಎ-0082 ಎಂದು ನಮೂದು ಆಗಿದೆ ಎಂದರೆ ಸರಿ. 1 ನೇ ಎದುರುದಾರರ ಟ್ರಾಕ್ಟರ್ ಅಪಘಾತಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.7 ರ ಛಾಯಚಿತ್ರದಲ್ಲಿ ಟ್ರಾಕ್ಟರ್ ಸಂಖ್ಯೆ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಕೆಎ-03-ಎ-0081 ಮತ್ತು ಕೆಎ-03-ಎ-0082 ನ್ನು ಅಪಘಾತಕ್ಕೆ ಸೇರಿಸಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.12 ರ ಕಲಂ.17 ರಲ್ಲಿ ಪೊಲೀಸರೊಂದಿಗೆ ಶಾಮೀಲಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಅಪಘಾತ ದಿನದಂದು ನನ್ನ ಮೃತ ಮಗನ ಜೊತೆಗೆ ನನ್ನ ಹಿರಿಯ ಮಗ ಸಹ ಇದ್ದನು. ಮಗುವಿನ ಜೊತೆ ನಾವು ತಂದೆ ತಾಯಿ ಯಾರಾದರೂ ಒಬ್ಬರು ಇದಿದ್ದರೇ ಈ ಅಪಘಾತವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಗನ ಅಂತ್ಯಸಂಸ್ಕಾರಕ್ಕೆ ರೂ.50 ಸಾವಿರ ಖರ್ಚು ಆಗಿದೆ ಎಂದು ಸುಳ್ಳು

ಹೇಳಿದ್ದೇನೆ ಎಂದರೆ ಸರಿಯಲ್ಲ . ನನಗೆ ಆರ್ಥಿಕವಾಗಿ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ಕೆಎ-03-ಎ-0081 ಮತ್ತು ಕೆಎ-03-ಎ-0082 ನ್ನು ಟ್ರಾಕ್ಟರ್ ಮತ್ತು ಟ್ರೈಲರ್ ಅಪಘಾತದಲ್ಲಿ ಭಾಗಿಯಾಗದೇ ಇರುವುದರಿಂದ 1 ನೇ ಎದುರುದಾರರು ಪರಿಹಾರ ನೀಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ **2** ನೇ ಎದುರುದಾರರ ಪರ ವಕೀಲರಿಂದಃ</u>

2 ನೇ ಎದುರುದಾರರ ಮತ್ತು ಅವರ ಪರ ವಕೀಲರು ಗೈರು ಹಾಜರಾಗಿದ್ದು, ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**